‘ಹಳೇದು ಹ್ಯಾಗೆ? ಸಮಸ್ಯೆ ಇರೋದೇ ಈಗ. ನೀನು ಹೋಗಿ ಆಸ್ತಿ ಕೇಳು. ಯಾರವನು ಸಿದ್ಧಪುರುಷ! ನಕ್ಷತ್ರ ಕ್ರೂರ, ಕಾಲು ಮುಂದಾಗಿ ಹುಟ್ಟಿದ್ದು ಕ್ರೂರ ಅಂದವನಿಗೆ ಇದು ಮಾತ್ರ ಹೊಳೀಲಿಲ್ಲ! ಅವನ ಆಸ್ತಿ ಇಟ್ಟುಕೊಂಡ್ರೆ ಮಾತ್ರ ವಂಶಕ್ಕೆ ಗಂಡಾಂತ್ರ ಇಲ್ಲಂತೇನು? ನಡಿ... ನಾನೂ ಬರತೀನಿ, ಎದೆಮೇಲೆ ಕೂತು ಕೇಳೋಣ...’ – ಮಗನ ಆವೇಶ ನೋಡಿ ಸುಗುಣಾ ಏನು ಹೇಳಬೇಕು ತೋಚದೆ ಗಂಡನ ಮುಖ ನೋಡಿದರೆ, ಅವನೂ ಅಮರೇಶನ ತರ್ಕವನ್ನು ಒಪ್ಪುವಂತೆ ತಲೆದೂಗುತ್ತಿದ್ದ. ಏನೂ ತಿಳಿಯದ ಮಗುವನ್ನು ತಂದು ಇಷ್ಟು ಬೆಳೆಸಿದವಳು ತಾನು. ಆ ಒಂದು ಧನ್ಯತಾ ಭಾವಕ್ಕೆ, ಆಸ್ತಿ ಕೇಳಿದ ಮರುಕ್ಷಣವೇ ಸಮರ್ಥನೆ ಒದಗಿಸಲಾರದ ಸ್ಥಿತಿ ಬರುತ್ತದೆ. ಅಣ್ಣನ ಮಕ್ಕಳ ವಿಷಯ ತನಗೆ ಗೊತ್ತಿಲ್ಲದ್ದಲ್ಲ. ಇಷ್ಟು ವರ್ಷದಮೇಲೆ ತಾನು ಹೋಗಿ ಆಸ್ತಿ ಕೇಳಿದರೆ ಕೊಡುವುದಿರಲಿ, ತನ್ನವರದು ಅಂತಿದ್ದ ಒಂದು ಸಂಬಂಧವೂ ಶಾಶ್ವತವಾಗಿ ಮುಚ್ಚಿಹೋಗುತ್ತದೆ. ‘ಅವ ಏನು ಇವತ್ತೇ ಇಂಜನಿಯರಿಂಗಿಗೆ ಹೊರಟಿಲ್ಲಲ್ಲ... ಪರೀಕ್ಷೆ, ರಿಜಲ್ಟು ಅಂತ ಎಷ್ಟೋ ತಿಂಗಳೆ ಹಿಡೀಬಹುದು. ಈಗ್ಲೆ ಯಾಕೆ ನಾವು ನಾವು ಬಡದಾಡೋದು?’ ಅಂತ ಆ ಕ್ಷಣದ ಚರ್ಚೆ ಮುಗಿಸಿದಳು.



ಮಂದಾ ಬಯಾಲಜಿಯಲ್ಲಿ ಡಿಗ್ರಿ ಮಾಡುವುದೆಂದು ಮೊದಲಿಂದಲು ಯೋಚಿಸಿದ್ದಳು. ತೊರದನಿಗೆ ಸಿಇಟಿ ಅಭ್ಯಾಸಕ್ಕೆ ಬೇಕಾದ್ದನ್ನು ಇಂಟರ್‌ನೆಟ್ಟನಲ್ಲಿ ಡೌನ್ಲೋಡ್ ಮಾಡಿ ಕೊಡುತ್ತಿದ್ದಳು. ಪರೀಕ್ಷೆ ಮುಗಿದು ಫಲಿತಾಂಶವೂ ಬಂದು ತೊರದ ಎರಡುಸಾವಿರದ ಒಳಗಿನ ಸ್ಥಾನದಲ್ಲಿದ್ದ. ಕೊನೆಗೂ ಆ ಕ್ಷಣ ಸುಗುಣಾಳ ಹೆಗಲಿಗೇ ಬಿದ್ದು ಮನೆಯ ಆರ್ಥಿಕ ತೊಂದರೆಯನ್ನು ಅವನಿಗೆ ಹೇಳಲೇಬೇಕಾಯಿತು. ತಾಯಿ ಹೋದಮೇಲೆ ಮಂದಾ ಅವನ ಹೆಗಲು ತಟ್ಟಿ, ‘ನೀನು ಮುಖ ಹಾಗೆ ಮಾಡಿಕೊಂಡಿದ್ರೆ ನಂಗೆ ಖುಷಿಯಾಗಲ್ಲ. ಇಂಜಿನಿಯರಿಂಗ್ ಒಂದೇ ಸಾಧನೆಯೇನೋ? ಡಿಗ್ರಿ ಮಾಡಿಕೋ. ಕೆಎಎಸ್ ಮಾಡಬಹುದು, ಐಎಎಸ್ ಮಾಡಬಹುದು. ಹ್ಯಾಗೂ ಬಸ್ಸು ಪಾಸಿದೆ; ಇಬ್ರೂ ಹಳಿಯಾಳಕ್ಕೆ ಓಡಾಡೋಣ’ ಎಂದ ಮಂದಾಳ ಸಾಂತ್ವನಕ್ಕೆ ಸಂಜೆ ಹೊತ್ತಿಗೆ ಚೇತರಿಸಿಕೊಂಡ. ದೊಡ್ಡ ಖರ್ಚು ತಪ್ಪಿದ್ದಕ್ಕೆ ಮನೆಯವರಿಗೆ ನೆಮ್ಮದಿಯಾಗಿತ್ತು. ಇವರ ಕಾಲೇಜು ವಿದ್ಯಾಭ್ಯಾಸಕ್ಕೆ ಯಾರೂ ಅಡ್ಡಿ ಮಾಡಲಿಲ್ಲ.

ಸಂಜೆ ಮಾಳಿಗೆಗೆ ಬಂದ ಸುಗುಣಾ ಎರಡು ಜೀನ್ಸ್ ಪ್ಯಾಂಟು, ಟೀಶರ್ಟುಗಳನ್ನು ತೊರದನಿಗೆ ಕೊಡುತ್ತ, ‘ರಾಜೇಂದ್ರ ಬಳಸದೇ ಇಟ್ಟಿದಾನೆ, ಚಿಕ್ಕದಾಗುತ್ತಂತೆ. ನಿಂಗೆ ಬರುತ್ತಾ ನೋಡು’ ಅಂದಳು. ಶರ್ಟನ್ನು ಮೈಗೆ ಹಿಡಿದು ಅಳತೆ ನೋಡಿಕೊಳ್ಳುತ್ತಿದ್ದವ ‘ಒಪ್ಪತದೇನೆ?’ ಎಂದು ಮಂದಾಳನ್ನು ಕೇಳಿದ. ನೋಡಿದಂತೆ ಮಾಡಿ ‘ಒಪ್ಪದೇ ಏನು?’ ಎಂದು ಚುಟುಕಾಗಿ ಉತ್ತರಿಸಿ ಮತ್ತೆ ಮಾಡುತ್ತಿದ್ದ ಕೆಲಸದಕಡೆ ತಿರುಗಿ ದೀರ್ಘವಾಗಿ ನಿಟ್ಟುಸಿರು ಬಿಟ್ಟಳು.

ಅಮರೇಶನ ಪಾಟರಿ ಉದ್ಯಮ ಖರ್ಚಿಗೆ ಆದಾಯ ಸರಿದೂಗುವ ಮಟ್ಟಕ್ಕೆ ಚೇತರಿಸಿಕೊಳ್ಳುತ್ತಿತ್ತು. ಬೆಳಿಗ್ಗೆ ತಿಂಡಿ ತಿಂದು ಊಟದ ಡಬ್ಬದೊಂದಿಗೆ ಮಂದಾ ಮತ್ತು ತೊರದ ದೊಡ್ಡರಸ್ತೆಯಲ್ಲಿ ಬಸ್ಸು ಹಿಡಿದರೆ ಬರುವುದು ಸಂಜೆಯಾಗುತ್ತಿತ್ತು. ರಜೆ ದಿನಗಳಲ್ಲಿ ಅಮರೇಶನಿಗೆ ಅವಶ್ಯಕತೆ ಬಿದ್ದರೆ ಅಥವಾ ಆಲೇಮನೆ, ಗದ್ದೆ ಒಕ್ಕುವಂತಹ ಸಂದರ್ಭದಲ್ಲಿ ತೊರದ ಸಹಾಯಕ್ಕೆ ಹೋಗುತ್ತಿದ್ದ. ಕೆಲ ಸಮಯ ಮಂದಾನೂ ಜೊತೆಗಿರುತ್ತಿದ್ದಳು. ಇವರು ಕೊನೆಯ ಸೆಮಿಸ್ಟರಿಗೆ ಬರುವ ಸಮಯಕ್ಕೆ ರಾಜೇಂದ್ರನ ಇಂಜನಿಯರಿಂಗ್ ಮುಗಿದು ಹೈದರಾಬಾದಿನಲ್ಲಿ ಕೆಲಸಕ್ಕೆ ಸೇರಿದ. ಮಂದಾ ಡಿಸ್ಟಿಂಕ್ಷನ್‌ನಲ್ಲಿ ಪಾಸಾದರೆ, ತೊರದ ಯುನಿವರ್ಸಿಟಿಗೆ ಎರಡನೇ ಸ್ಥಾನ ಪಡೆದಿದ್ದ. ಉಪನ್ಯಾಸಕರು, ‘ತಮ್ಮ ಪರಿಚಯವಿದ್ದವರೊಬ್ಬರು ಹುಬ್ಬಳ್ಳಿಯ ಇಲೆಕ್ಟ್ರೋ ಪ್ಲೇಟಿಂಗ್ ಫ್ಯಾಕ್ಟರಿಯಲ್ಲಿ ಸಹಾಯಕ ಕೆಮಿಸ್ಟ್ ಬೇಕು’ ಅಂತ ಹೇಳಿರುವ ಪ್ರಸ್ತಾಪ ಮಾಡಿದ್ದರು. ಎಮ್ಮೆಸ್ಸಿ ಬಗ್ಗೆಯಾಗಲೇ ಭರವಸೆ ಕಳೆದುಕೊಂಡಿದ್ದವ ಇಂಟರ್ನೆಟ್ಟಿನಲ್ಲಿ ಬೇರೆಬೇರೆ ಕಂಪನಿಗಳಿಗೆ